ನಿಜವಾಗಿ, ಮಗ ಮತ್ತು ಮಳೆಯ ಆಗಮನದ ನಿರೀಕ್ಷೆ ದೇಸಾಯರ ಪಾಲಿಗೆ ತುಂಬ ಹಿತತರುವ ಸಂಗತಿಗಳು. ಮಗ, ಮಳೆ ಇಲ್ಲದೆ ಬದುಕೇ ಇಲ್ಲ ಎಂದು ಒಂದು ಕಾಲಕ್ಕೆ ಅಂದುಕೊಂಡೂ ಆಗಿತ್ತು. ಬದುಕಿಗೆ ಸದಾ ಸುಖ, ನೆಮ್ಮದಿ ತಂದು ಕೊಡಬೇಕಾಗಿದ್ದ ಮಗ ಮತ್ತು ಮಳೆ ತಮ್ಮ ಪಾಲಿಗೆ ಮರೀಚಿಕೆಯಾಗಿ ಹೀಗೆ ಕಂಗಾಲು ಮಾಡುವುದೇಕೋ?

ಮಳೆ ಬರುವುದಂತೂ ತನ್ನ ನಿಯಂತ್ರಣದಲ್ಲಿ ಇಲ್ಲ. ಆದರೆ, ಗಿರಿಯ ಮೇಲಿನ ತಮ್ಮ ಹಿಡಿತ ತಪ್ಪಿದ್ದೂ ಹೇಗೆ? ದೇಸಾಯರಿಗೆ ಹಿಂದಿನ ದಿನಗಳ ನೆನಪು....

**ದೇಸಾಯರ ತಲೆ ಗಲ ಗಲ ಅಲುಗಾಡಿತು 'ಮಗು ಬೇರೆ ಇದೆಯಲ್ಲಪ್ಪಾ' ಅವರ ಧ್ವನಿಯಲ್ಲಿ ಹತಾಶೆ. 'ನಾಳೆಯಲ್ಲ ನಾಡಿದ್ದೇ ನಮ್ಮ ಮದುವೆ. ನಂತರ ಆ ಮಗು 'ನಿಧಿ' ನನ್ನ ಮಗಳಾಗ್ತಾಳೆ' ಎಂದವನು ತುಸು ತಡೆದು ಮತ್ತೆ ಮಾತು ಮುಂದುವರಿಸಿದ 'ನೀವಿಬ್ಬರೂ ಬರ್ತೀರಿತಾನೇ ಮದುವೆಗೆ?'**

*****

ಆ ದಿನ ಸುಳಿವು ಕೊಡದ ಹಾಗೆ ಗಿರಿ ಬಂದಿಳಿದಾಗ ದೇಸಾಯರಿಗೆ ಮತ್ತದೇ ಮಳೆ ಬಂದಷ್ಟು ಸಂತಸ. ಎರಡು ವರ್ಷಗಳಾಗಿತ್ತಲ್ಲ ಮಗನ ಮುಖ ನೋಡಿ. ಫೋನಿನಲ್ಲೂ ಕೈಗೆ ಸಿಗದೆ ನುಣಚಿಕೊಳ್ಳುತ್ತಿದ್ದ. 'ಹುಡುಗಿ ನೋಡಲು ಯಾವಾಗ ಬರುತ್ತೀ' ಎಂಬುದು ತಮ್ಮ ಧಾವಂತ. 'ಇನ್ನೂ ಎರಡು ಮೂರು ವರ್ಷ ಬೇಡ' ಅನ್ನುತ್ತಿದ್ದ. 'ನಾನಿನ್ನೂ ನನ್ನ ಕರಿಯರ್ ರೂಪಿಸಿಕೊಳ್ಳಬೇಕಾಗಿದೆ' ಎಂದು ಅವನ ಮಾತು ತಮಗೂ ಅರ್ಥವಾಗುತ್ತಿರಲಿಲ್ಲ. ಹೆಂಡತಿ ಸಹ 'ಈಗಿನ ಹುಡುಗರು ವಯಸ್ಸಿಗೆ ಬಂದರೂ ಅದೇಕೆ ಮದುವೆ ಮಾಡಿಕೊಳ್ಳಲು ಹಿಂಜರಿಯುತ್ತಾರೋ' ಎಂದು ಪೇಚಾಡುತ್ತಿದ್ದಳು.

ಜತೆಗೇ ಕೂತು ಊಟ ಮಾಡಿದರೂ ಮಾತು ಎಷ್ಟೋ ಅಷ್ಟೇ. ದೇಸಾಯರೂ ಹೆಚ್ಚು ರಮಿಸುವ ಗೋಜಿಗೆ ಹೋಗಲಿಲ್ಲ. ಆದರೆ, ದಣಿದಿರುವ ಮಗ ಊಟವಾದ ಮೇಲೆ ಕೋಣೆಗೆ ಹೋಗಿ ವಿಶ್ರಾಂತಿ ಪಡೆಯುತ್ತಾನೆ ಅನಿಸಿದ್ದಕ್ಕೆ ವ್ಯತಿರಿಕ್ತವಾಗಿ ಬಳಿಯಲ್ಲಿಯೇ ಬಂದು ಕೂತ. ನೋಡಿದರೆ ಏನೋ ಹೇಳುವ ಸನ್ನಾಹ ಕಾಣಿಸಿ ದೇಸಾಯರಿಗೆ ಕುತೂಹಲ.

'ಅಪ್ಪಾ,' ಗಿರಿ ಹೇಳತೊಡಗಿದ. 'ನೇರವಾಗಿ ವಿಷಯಕ್ಕೆ ಬರ್ತೀನಿ. ಮುಂಬೈನಲ್ಲಿ ನಾನೊಬ್ಬಳು ಹುಡುಗೀನ ನೋಡಿದೀನಿ. ಅವಳು ನನ್ನಷ್ಟೇ ಕಲಿತವಳು. ನಮ್ಮ ಆಫೀಸಿನಲ್ಲಿಯೇ ಕೆಲಸ. ತಂದೆ–ತಾಯಿ ಯಾರೂ ಇಲ್ಲ. ನನಗೆ ಮೆಚ್ಚುಗೆ ಆಗಿದೆ. ಅವಳನ್ನು ಮದುವೆ ಆಗಬೇಕೂಂತ...'

ಮಗ ಬಂದು ಹತ್ತಿರ ಕೂತಾಗಲೇ ಇಂತಹುದೇನೋ ಸಂಗತಿ ಇರಬೇಕು ಎಂದು ಕಾದಿದ್ದ ದೇಸಾಯರಿಗೆ ಮಗನ ಮಾತಿನಿಂದ ವಿಶೇಷ ಆತಂಕವೇನೂ ಆಗಲಿಲ್ಲ. ಮುಖ ಅರಳಿಸಿ 'ಯಾರು?' ಅಂತ ಕೇಳಿದರು.

'ವಿನತಾ ಅಂತ...'

'ಹೆಸರಲ್ಲ ನಾ ಕೇಳಿದ್ದು. ಯಾವ ಜಾತಿ?'